**ನೋಟ** 11

ಜೋಗ್ ಫಾಲ್ಸ್ ಐಬಿ ಬಳಿ, ಅನಧಿಕೃತ ಪಾನ್ ಡಬ್ಬಿ

'ಕಾಣೆಯಾಗಿದ್ದಾರೆ'

ಹೆಸರು: ಪಿಂಕಿ ಉರ್ಫ್ ಪ್ರಿಯಾಂಕ
ವೃತ್ತಿ: ಯು ಕೆ ಜಿ
ವಯಸ್ಸು: 5
ಕಲರ್: ಕೆಂಪು ಗುಲಾಬಿ
ವಿಳಾಸ: ಡ್ಯಾಡಿ ಕಾಲೋನಿ, ರಾಯಚೂರು

ಹೆಸರು ಪ್ರಿಯಾಂಕವಾದರೂ
ಮನೆಯವರೆಲ್ಲಾ ಮುದ್ದಿನಿಂದ
ಪಿಂಕಿ ಪಿಂಕಿ ಎಂದೇ ಕರೆಯುತ್ತಿದ್ದರು

ತಡರಾತ್ರಿ
ಬಾಲ್ಕನಿಯಲಿ ಸಿಗರೇಟ್ ಸೇದುತ್ತಾ ಕೂಡುವ
ಪಕ್ಕದ ಮನೆಯ ಮುದುಕ
ಅಡುಗೆ ಮನೆಯ ಲೈಟು
ಆರಿಸುವ ಹೊತ್ತಿನಲಿ
ಅವರಮ್ಮನ ಜೊತೆ
ಕೊನೆಯ ಸಲ ಈಕೆಯನ್ನು ನೋಡಿರುವುದಾಗಿ
ಒಪ್ಪಿಕೊಂಡಿದ್ದಾನೆ

ಸಂಪರ್ಕ: pinkyukg05@gmail.com



★
ಬಾಡಿಗೆ ತಾಯಿಯಂತಿರುವ ಈ ನಗರ
ಬಾಣಂತಿ ಬೇನೆ ತಿನ್ನುತ್ತಾ ಮಗ್ಗಲು ಬದಲಿಸುವಾಗ
ಮಾಡುವ ಕೆಲಸ ಬಿಟ್ಟು
ಏನೋ ನೆನಪಾದವರಂತೆ
ಒಮ್ಮಿಂದೊಮ್ಮೆಲೆ ಎದ್ದು
ಇವರು ಹೋದದ್ದಾದರೂ ಎಲ್ಲಿಗೆ?

ಈ ಕಾವ್ಯ ರೂಪಕದ ಪಯಣ ಮುಂದಿನ ಸಂಚಿಕೆಯಲ್ಲಿ ಮತ್ತೊಬ್ಬ ಕವಿಯೊಂದಿಗೆ ಮುಂದುವರೆಯುವುದು.